699 (1218) **ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)** –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ದಿನಾಂಕ 30–06–2007 ರವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ,

(ಆ) ಇಂತಹ ರೈತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ನೀಡುವ ಕೇಂದ್ರ ಸರ್ಕಾರದ ಪ್ಯಾಕೇಜ್ ಅಡಿ ಕಳೆದ 3 ವರ್ಷಗಳ ಅವಧಿಯಲ್ಲಿ ನೀಡಲಾದ ಪರಿಹಾರವೆಷ್ಟು ಮತ್ತು ಕಲ್ಪಿಸಿದ ಪುನರ್ವಸತಿಗಳಾವುವು (ಜಿಲ್ಲಾವಾರು ಮಾಹಿತಿ ನೀಡುವುದು) ,

(ಇ) ಈ ಸಂಬಂಧ ಕ್ರಿಯಾ ಯೋಜನೆಯನ್ನೇನಾದರೂ ತಯಾರಿಸಲಾಗಿದೆಯೇ (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ರಾಜ್ಯದಲ್ಲಿ ಏಪ್ರಿಲ್ 2004 ರಿಂದ ಜೂನ್ 2007 ರ ಅಂತ್ಯದವರೆಗೆ 806 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

(ಆ) ಕೇಂದ್ರ ಸರ್ಕಾರದ ಪುನರ್ವಸತಿ ಯೋಜನೆಯ ಅತಿ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾದ ರಾಜ್ಯದ ಆರು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಿದ್ದು, ಇದನ್ನು 2006 ರ ಅಕ್ಟೋಬರ್ ಮಾಹೆಯಲ್ಲಿ ಘೋಷಿಸಲಾಗಿದೆ

(ಇ) ಇದರಡಿ ಕೃಷಿ ಇಲಾಖೆ ಒಂದೇ ಅಲ್ಲದೆ ಜಲ ಸಂಪನ್ಮೂಲ, ಸಹಕಾರ, ಸಣ್ಣ ನೀರಾವರಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ, ತೋಟಗಾರಿಕೆ ಇಲಾಖೆಗಳೂ ಸಹ ಒಳಗೊಂಡಿದ್ದು, ಇವುಗಳು ತಯಾರಿಸಿದ ಕ್ರಿಯಾ ಯೋಜನೆಯ ಪ್ರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ

ಅನುಬಂಧ-I

ಜಿಲ್ಲಾವಾರು ಹಾಗೂ ವರ್ಷವಾರು ರೈತರ ಆತ್ಮಹತ್ಯೆ ಪ್ರಕರಣಗಳ ವಿವರಗಳು

ಕ್ರ ಸಂ	ಜಿಲ್ಲೆಗಳು	2004-05	2005-06	2006-07	2007-08 ಜೂನ್-07 ರವರೆಗೆ	ಒಟ್ಟು
1	ಬಾಗಲಕೋಟೆ	6	3	7	0	16
2	ಬೆಂಗಳೂರು ಗ್ರಾಮಾಂತರ	6	7	6	0	19
3	ಬೆಂಗಳೂರು ನಗರ	0	0	0	0	00
4	ಬೀದರ್	7	9	30	20	66
5	ಹಾಸನ	37	26	19	4	86
6	ಚಾಮರಾಜನಗರ	2	2	1	1	06
7	ಹಾವೇರಿ	9	2	11	1	23
8	ಉತ್ತರ ಕನ್ನಡ	0	7	3	0	10
9	ಧಾರವಾಡ	9	2	4	0	15
10	ಕೊಪ್ಪಳ	15	11	16	1	43
11	ಮಂಡ್ಯ	11	0	8	0	19
12	ಚಿಕ್ಕಮಗಳೂರು	22	4	27	3	56
13	ರಾಯಚೂರು	3	2	2	1	08
14	ತುಮಕೂರು	11	6	22	0	39
15	ಶಿವಮೊಗ್ಗ	12	8	30	0	50
16	ಕೋಲಾರ	10	3	3	0	16
17	ಮೈಸೂರು	1	0	4	0	05
18	ಉಡುಪಿ	1	0	0	0	01
19	ಕೊಡಗು	12	13	13	0	38
20	ಬೆಳಗಾಂ	33	13	24	8	78
21	ದಾವಣಗೆರೆ	12	5	15	0	32
22	ಬಳ್ಳಾರಿ	11	5	10	0	27
23	ಚಿತ್ರದುರ್ಗ	19	12	19	0	50
24	ಗುಲ್ಬರ್ಗ	6	7	10	2	25
25	ಬಿಜಾಪುರ	9	9	17	3	38
26	ದಕ್ಷಿಣ ಕನ್ನಡ	5	4	4	1	14
27	ಗದಗ	2	3	15	6	26
	ಒಟ್ಟು	**271**	**163**	**320**	**52**	**806**